2002-03ನೇ ಸಾಲಿಗೆ ನಷ್ಟದಲ್ಲಿದ್ದು ಸ್ಥಗಿತಗೊಂಡ ಸಾರ್ವಜನಿಕ ಉದ್ದಿಮೆಗಳ ಪಟ್ಟಿ

ಅನುಬಂಧ -II

ಕ್ರಮ ಸಂಖ್ಯೆ	ಸಾರ್ವಜನಿಕ ಉದ್ದಿಮೆಗಳ ಹೆಸರು	ರೂ.ಲಕ್ಷಗಳಲ್ಲಿ
1.	ಮೈಸೂರು ಟೋಬ್ಯಾಕೋ ಕಂಪನಿ ನಿಯಮಿತ	32.64
2.	ಮೈಸೂರು ಮ್ಯಾಚ್ ಕಂಪನಿ ನಿಯಮಿತ	0.32
3.	ಎನ್.ಜಿ.ಇ.ಎಫ್.-ಲಿಮಿಟೆಡ್	15747.89
4.	ಮೈಸೂರು ಕಾಸ್ಟಟಿಕ್ಸ್ ಲಿಮಿಟೆಡ್	45.97
5.	ಕರ್ನಾಟಕ ರಾಜ್ಯ ವೆನೀರ್ಸ್ ನಿಯಮಿತ	62.44
6.	ಕರ್ನಾಟಕ ರಾಜ್ಯ ಜವಳಿ ನಿಯಮಿತ	620.71
7.	ಕರ್ನಾಟಕ ಪಲ್ಪ್‌ವುಡ್ ನಿಯಮಿತ	127.35
8.	ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ ನಿಯಮಿತ	61.27
	ಒಟ್ಟು	**16698.59**

ವಿರಾಜಪೇಟೆ ಟೌನ್ ಪಂಚಾಯಿತಿನಲ್ಲಿ ಕಾಮಗಾರಿಗಳಲ್ಲಿ ಆಗಿರುವ ಲೋಪದೋಷಗಳು

171(386) ಶ್ರೀ ಬಸವರಾಜು ಹೆಚ್.ಡಿ.(ವಿರಾಜಪೇಟೆ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ವಿರಾಜಪೇಟೆ ಟೌನ್ ಪಂಚಾಯತ್‌ನಲ್ಲಿ ಕಳೆದ ಮೂರು ವರ್ಷಗಳಿಂದ ವಾರ್ಷಿಕ ಲೆಕ್ಕ ತಪಾಸಣೆ ಮಾಡಲಾಗಿದೆಯೆ ;

ಆ) ಹಾಗಿದ್ದಲ್ಲಿ, ಲೆಕ್ಕ ತಪಾಸಣಾ ಸಂದರ್ಭದಲ್ಲಿ ಉಲ್ಲೇಖಿಸಿರುವ ಲೋಪದೋಷಗಳೇನು ; ಮತ್ತು ಅವುಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ವಿರಾಜಪೇಟೆ ಟೌನ್ ಪಂಚಾಯತ್‌ನಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆದಿರುವ ಕಾಮಗಾರಿಗಳು ಯಾವುವು ಮತ್ತು ಅವುಗಳಿಗಾಗಿ ಮಾಡಿರುವ ವೆಚ್ಚವೆಷ್ಟು ; (ವಿವರ ನೀಡುವುದು)?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು):

ಅ) ಹೌದು.

ಆ) ಲೋಪದೋಷಗಳನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಮೂರು ವರ್ಷಗಳಲ್ಲಿ ನಡೆದಿರುವ ಕಾಮಗಾರಿಗಳು ಮತ್ತು ತಗಲಿರುವ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಕ್ರಮ ಸಂಖ್ಯೆ	ವಿವರ	ವೆಚ್ಚ		
		2000-01	2001-02	2002-03
1.	ಕಟ್ಟಡ ನಿರ್ಮಾಣ	14,50,307-00	4,30,130-00	37,688-00
2.	ರಸ್ತೆ ನಿರ್ಮಾಣ	1,60,473-00	3,79,045-00	18,522-00
3.	ಚರಂಡಿ ನಿರ್ಮಾಣ	5,04,788-00	2,26,613-00	18,936-00

1	2	3	4	5
4.	ಕುಡಿಯುವ ನೀರಿನ ಕೆಲಸ	2,05,662–00	1,93,605–00	1,02,697–00
5.	ಶೇಕಡ 18ರ ಮೀಸಲಾತಿ	4,67,969–00	–	–
6.	ಶೌಚ ಗೃಹ ನಿರ್ಮಾಣ	5,000–00	1,58,868–00	26,856–00
7.	ಕಟ್ಟಡ ರಿಪೇರಿ	88,390–00	1,75,489–00	1,38,925–00
8.	ರಸ್ತೆ ರಿಪೇರಿ	12,49,979–00	2,44,653–00	1,29,816–00
9.	ಚರಂಡಿ ರಿಪೇರಿ	41,252–00	17,968–00	5,662–00
10.	ಕೆರೆಗಳು	1,03,250–00	40,775–00	63,760–00
11.	ನೆಲಸಮತಟ್ಟು ಸ್ಮಶಾನ ಜಾಗ	–	–	50,441–00
12.	ತರಕಾರಿಮಾರುಕಟ್ಟೆ ನಿರ್ಮಾಣ	–	–	2,75,000–00

ವಿರಾಜ ಪೇಟೆಯಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳು.

172(393) ಶ್ರೀ ಬಸವರಾಜು ಹೆಚ್.ಡಿ.(ವಿರಾಜಪೇಟೆ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ವಿರಾಜಪೇಟೆ ಟೌನ್ ಪಂಚಾಯತ್ ವತಿಯಿಂದ ವಿರಾಜಪೇಟೆ ನಗರದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸುವಲ್ಲಿ ಅವ್ಯವಹಾರ ನಡೆದು ವಾಣಿಜ್ಯ ಸಂಕೀರ್ಣ ಪೂರ್ಣಗೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಈ ಅವ್ಯವಹಾರಕ್ಕೆ ಯಾರು ಜವಾಬ್ದಾರರಾಗಿರುತ್ತಾರೆ ಮತ್ತು ಸರ್ಕಾರ ಇವರ ಮೇಲೆ ಕೈಗೊಂಡ ಕ್ರಮವೇನು ;

ಇ) ಈ ಕಾಮಗಾರಿಗೆ ಸಂಬಂಧಿಸಿದಂತೆ ಎಷ್ಟು ಹಣ ವೆಚ್ಚವಾಗಿರುತ್ತದೆ ಮತ್ತು ವೆಚ್ಚ ಮಾಡಿದ ಹಣಕ್ಕೆ ಸರ್ಕಾರದ ಅನುಮೋದನೆ ಪಡೆಯಲಾಗಿದೆಯೇ ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು):

ಅ) ಹೌದು.

ಆ) ಮಡಿಕೇರಿ ಜಿಲ್ಲಾಧಿಕಾರಿಗಳು ಇದರ ಬಗ್ಗೆ ತನಿಖೆ ನಡೆಸಲು, ಈಗಾಗಲೇ ಕ್ರಮ ವಹಿಸಿದ್ದಾರೆ. ತನಿಖಾ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಈ ಕಾಮಗಾರಿಗೆ ರೂ. 63,95,193–00 ಗಳು ಖರ್ಚಾಗಿರುತ್ತದೆ. ವೆಚ್ಚ ಮಾಡಿರುವ ಹಣಕ್ಕೆ ಸರ್ಕಾರದ ಅನುಮೋದನೆ ಪಡೆದಿಲ್ಲ.

ವಿರಾಜ ಪೇಟೆ ನೀರು ಸರಬರಾಜು ಯೋಜನೆ

173(395) ಶ್ರೀ ಹೆಚ್.ಡಿ. ಬಸವರಾಜು.(ವಿರಾಜಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?-

ಅ) ವಿರಾಜಪೇಟೆ ನಗರಕ್ಕೆ ಬೇತ್ರಿ ಬಳಿ ಇರುವ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆ ಕಳೆದ ಮೂರು ವರ್ಷದ ಹಿಂದೆ ಪ್ರಾರಂಭವಾಗಿದ್ದು, ಈವರೆಗೆ ಪೂರ್ಣ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;